ಸೀಮಿತವಾಗಿದೆಯೆ? ಅಥವಾ ಚಿತ್ರದುರ್ಗ ನಗರದಲ್ಲಿರತಕ್ಕ ಕೊಳಚೆ ಪ್ರದೇಶದ ಜನರಿಗೂ ವಸತಿಗೃಹಗಳನ್ನು ನಿರ್ಮಾಣ ಮಾಡತಕ್ಕ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೆ?

ಶ್ರೀ ಕೆ.ಜೆ.ಜಾರ್ಜ್ : ಸಾವಿರ ಮನೆಗಳನ್ನು ಬೆಂಗಳೂರು ನಗರದಲ್ಲಿ ಮಾತ್ರ ಕಟ್ಟತಕ್ಕ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇನ್ನು 30 ಸಾವಿರ ಮನೆಗಳನ್ನು ಬೆಂಗಳೂರು ನಗರದಿಂದ ಹೊರಗಡೆ ಕಟ್ಟುವುದಕ್ಕೆ ನಾವು ಪರಿಶೀಲಿಸುತ್ತಿದ್ದೇವೆ. ಸರ್ಕಾರದ ಜಾಗ ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲಾ ಆದಷ್ಟು ಜಾಗ್ರತೆ ಮನೆಗಳನ್ನು ಕಟ್ಟುವುದಕ್ಕೆ ವಿಪ್ಪಾಡು ಮಾಡುತ್ತಿದ್ದೇವೆ. ಈಗ ಕ್ಯಾಬಿನೆಟ್ ಮುಂದಿದೆ ಕ್ಯಾಬಿನೆಟ್ ಆದಕೂಡಲೇ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಸುಬ್ರಹ್ಮಣ್ಯ ದೇವಾಲಯದ ಆಡಳಿತ ಮಂಡಲಿಯ ಸಮಿತಿ ರಚನೆ

531 - ಶ್ರೀ ಕೆ ಕುಶಾಲ (ಸುಳ್ಯ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸುಳ್ಯ ತಾಲ್ಲೂಕಿನ ಶ್ರೀ ಕುಕ್ಕೆ ಸುಬ್ರಮಣ್ಯಸ್ವಾಮಿ ದೇವಾಲಯದ ಆಡಳಿತದ ಮಂಡಲಿಯ ಸಮಿತಿ ಅವಧಿಯು ಯಾವ ವರ್ಷಕ್ಕೆ ಮುಗಿಯುವುದು;

2) ಸದರಿ ದೇವಾಲಯದ ಹೊಸ ಆಡಳಿತ ಮಂಡಲಿ ಸಮಿತಿಯನ್ನು ಇನ್ನೂ ರಚಿಸದೇ ಇರಲು ಕಾರಣವೇನು

3) ಸದರಿ ದೇವಾಲಯದ ಆಡಳಿತ ಮಂಡಲಿ ಸಮಿತಿಯನ್ನು ಶೀಘ್ರವಾಗಿ ರಚಿಸಲಾಗುವುದೇ?

4) ಹಾಗಿದ್ದರೆ ಸದರಿ ದೇವಾಲಯದ ಆಡಳಿತ ಮಂಡಲಿ ಸಮಿತಿಯನ್ನು ಸದ್ಯಕ್ಕೆ ರಚಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) :

1) 3.1.1990ಕ್ಕೆ ಮುಗಿದಿದೆ.

2) ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ.

3) ನ್ಯಾಯಾಲಯದ ತೀರ್ಪು ಬಂದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

4) ನ್ಯಾಯಾಲಯದಿಂದ ಬಂದಿರುವ ತಡೆಯಾಜ್ಞೆಯನ್ನು ತೆರವು ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ತಡೆಯಾಜ್ಞೆ ತೆರವು ಆದ ಕೂಡಲೇ ಆಡಳಿತ ಸಮಿತಿಯನ್ನು ರಚಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಕುಶಾಲ: ಮಾನ್ಯ ಅಧ್ಯಕ್ಷರೆ ಸುಳ್ಯ ತಾಲ್ಲೂಕಿನ ಶ್ರೀ ಸುಬ್ರಮಣ್ಯ ಸ್ವಾಮಿ ದೇವಾಲಯದ ಆಡಳಿತ ಮಂಡಳಿ ರಚಿಸಲು ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಯಾವ ರೀತಿಯ ತಡೆಯಾಜ್ಞೆ ಇದೆ? ಉಚ್ಚನ್ಯಾಯಾಲಯದ ತೀರ್ಪು ಯಾವ ಹಂತದಲ್ಲಿದೆ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಧರ್ಮದರ್ಶಿಗಳ ನಾಮಿನೇಷನ್ ಮಾಡುವುದಕ್ಕೆ ಡಿ.ಸಿ.ಯವರು ಅರ್ಜಿಗಳನ್ನು ಕರೆದರು. ಅದರ ವಿರುದ್ಧವಾಗಿ ಅಲ್ಲಿರತಕ್ಕ ರೈ ಎನ್ನುವವರು ಹೈಕೋರ್ಟಿನಿಂದ ಸ್ಟೇ ತಂದಿದ್ದಾರೆ. ಆ ಸ್ಟೇ ವೆಕೇಟ್ ಆಗುವವರೆಗೆ ಜಿಲ್ಲಾಧಿಕಾರಿಯವರು ಯಾರನ್ನೂ ನಾಮಿನೇಷನ್ ಮಾಡುವುದಕ್ಕಾಗುವುದಿಲ್ಲ. ಸ್ಟೇ ವೆಕೇಟ್ ಆದಕೂಡಲೇ ನಾಮಿನೇಟ್ ಮಾಡುತ್ತಾರೆ.

ಶ್ರೀ ಕೆ. ಕುಶಾಲ: ತಡೆಯಾಜ್ಞೆಯನ್ನು ತೆರವು ಮಾಡಲಿಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಎಂಡೋಮೆಂಟ್ ಕಮೀಷನರ್‌ರವರು ಸರ್ಕಾರಿ ವಕೀಲರನ್ನು ಸಂಪರ್ಕಮಾಡಿ ಆದಷ್ಟು ಬೇಗ ತಡೆಯಾಜ್ಞೆಯನ್ನು ವೆಕೇಟ್ ಮಾಡಿಸುವುದಕ್ಕೆ ಹೇಳಿದ್ದಾರೆ ನಿನ್ನೆ ಕೂಡ ಇದರ ಬಗ್ಗೆ ಅವರನ್ನು ಕರೆಸಿ ಮಾತನಾಡಿದ್ದೇನೆ.

ಕಂದಾಯ ಇಲಾಖೆಯ ನಾಡ ಕಛೇರಿಗಳನ್ನು ಮುಚ್ಚುವುದು

1299 - ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಂದಾಯ ಇಲಾಖೆಯಲ್ಲಿ ಜಾರಿಗೊಳಿಸಿರುವ ನಾಡ ಕಛೇರಿಗಳು ನಿರೀಕ್ಷಿಸಿದಷ್ಟು ಸಫಲವಾಗದೇ ಇರುವುದನ್ನು ಸರ್ಕಾರ ಗಮನಿಸಿದೆಯೆ?*

ಆ) *ರಾಜ್ಯದಲ್ಲಿ ನಾಡ ಕಛೇರಿಗಳನ್ನು ರದ್ದುಪಡಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು.

ಆ) ಪರಿಶೀಲಿಸಲಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಮೊದಲಿನ ಪ್ರಶ್ನೆಗೆ ಹೌದು ಎಂದು ಉತ್ತರಿಸಿದ್ದಾರೆ, 2ನೇ ಪ್ರಶ್ನೆಗೆ ಪರಿಶೀಲಿಸುತ್ತೇನೆಂದು ಹೇಳಿದ್ದಾರೆ. ಅದರಲ್ಲಿ ನ್ಯೂನತೆ ಇದೆ ಎಂದು ಸರ್ಕಾರ ಒಪ್ಪಿಕೊಂಡಿರುವಾಗ ಪರಿಶೀಲನೆ ಮಾಡತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ. ತಾವು ದಯಮಾಡಿ ಈಗಾಗಲೆ ಅಧ್ಯಕ್ಷರು ಕೊಟ್ಟಿರುವ ಅಪ್ಪಣೆಯ ರೀತಿ ಯಾವತ್ತು ಪರಿಶೀಲನೆ ಮಾಡುತ್ತೀರಿ ಎಂಬುದನ್ನು ನಿರ್ದಿಷ್ಟವಾಗಿ ಹೇಳತಕ್ಕದ್ದು ತಮ್ಮ ಕರ್ತವ್ಯ ಮತ್ತು ಸರ್ಕಾರದ ಕರ್ತವ್ಯವೂ ಹೌದು. ಈ ನಾಡ ಕಛೇರಿಗಳನ್ನು ಮಾಡಿದ ಮೂಲ ಉದ್ದೇಶವೇನೆಂದರೆ, ಜನರು ತಾಲ್ಲೂಕಿಗೆ ಅಲೆಯಬಾರದೆಂದು ಹೋಬಳಿಯಲ್ಲಿ ಮಾಡಿದರೆ, ಜನಗಳಿಗೆ ಅನುಕೂಲವಾಗುತ್ತದೆ, ಸೌಕರ್ಯವಾಗುತ್ತದೆ, ಮತ್ತು ಅದರ ಜೊತೆಗೆ 50 ರೂಪಾಯಿ ಖರ್ಚಾಗುವ ಕಡೆ ಇನ್ನೂ ಕಡಿಮೆ ಖರ್ಚಾಗಲಿ ಎಂಬ ಉದ್ದೇಶವನ್ನು ಇಟ್ಟುಕೊಂಡು ಮಾಡಲಾಗಿತ್ತು. ಆದರೆ ಇಂದು ಅದಕ್ಕೆ ವ್ಯತಿರಿಕ್ತವಾಗಿದೆ. ಈ ನಾಡ ಕಛೇರಿಯಿಂದ ಒಂದು ಪಹಣಿ ತರಬೇಕಾದರೆ ಹಿಂದೆ 50 ರೂಪಾಯಿ ಖರ್ಚು ಆಗುತ್ತಿದ್ದದ್ದು ಇವತ್ತು 100 ರೂಪಾಯಿ ಖರ್ಚಾಗುತ್ತಿದೆ. ಲಂಚಗುಳಿತನ ನಿಯಂತ್ರಣವಾಗಿಲ್ಲ. ಅಲ್ಲಿ ನಡೆಯುತ್ತಿರುವ ವ್ಯವಹಾರವನ್ನು ಹೇಳಬೇಕೆಂದರೆ, ಅದು ನಾಚಿಕೆ ಪಡುವ ಮಟ್ಟಕೆ ಹೋಗಿದೆ. ಆದುದರಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡಿ ಹೇಳುತ್ತೇನೆ. ತಾವು ಧೈರ್ಯವಿರುವ ಯುವಕ ಮಂತ್ರಿಗಳಾಗಿದ್ದೀರಿ, ಈ ನಾಡ ಕಛೇರಿಗಳನ್ನು ನಿರ್ದಿಷ್ಟವಾಗಿ ಇವತ್ತು ರದ್ದು ಮಾಡಿದ್ದೇನೆ ಎಂಬ ಮಾತನ್ನು ಹೇಳಬೇಕು ಇದರಿಂದ ಹಣವು ಉಳಿಯುತ್ತದೆ, ದಯಮಾಡಿ ನಿರ್ದಿಷ್ಟವಾಗಿ ಇವತ್ತೇ ಹೇಳಬೇಕು ಎಂದು ಒತ್ತಾಯಪೂರ್ವಕವಾಗಿ ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಇದನ್ನು ಡೀಸೆಂಟ್ರಲೈಜೆಷನ್ ಮಾಡಬೇಕೆಂದು ನಾಡಕಛೇರಿಗಳನ್ನು ಪ್ರತಿಯೊಂದು ಹೋಬಳಿಯಲ್ಲಿ ಮಾಡಿದ್ದೇವೆ. ಮತ್ತು ಅಲ್ಲಿ ಪಹಣಿ ಪತ್ರ, ಜಾತಿಪತ್ರ, ಆದಾಯ ಪತ್ರ, ವೃದ್ಧಾಪ್ಯವೇತನ ಮುಂತಾದುವುಗಳನ್ನು ಅಲ್ಲೇ ಸೆಟಲ್ ಮಾಡಿ ಕೊಡಬೇಕೆಂಬ ದೃಷ್ಟಿಯಿಂದ ಈ ನಾಡಕಛೇರಿಗಳು ಸ್ಥಾಪನೆಯಾದವು. ಆದರೆ ಅವರಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿಲ್ಲ.